ಮುಂದುವರೆಯುತ್ತಲೇ ಇದೆಯೆನ್ನುವ ವಾಸ್ತವವು ನನ್ನೊಳಗೊಂದು ಶೀತಲತೆಯನ್ನು ತುಂಬುತ್ತಿತ್ತು. ಅವನಿದ್ದಿದ್ದು ಹೌದೇ! ಎಂದು ಅನುಮಾನಿಸುವ ಹಾಗಿದೆಯಲ್ಲ ಈ ಬದುಕು! ನಾನಾದರೂ ಇದ್ದೇನೆಯೇ? ನಾನು ಹೋದರೆ? ಈ ಕ್ಷಣ... ಈಗಲೇ... ಯಾರೋ ಕರೆಯುತ್ತಿರುವಂತೆ ಭಾಸವಾಗುತ್ತಿತ್ತು... ಆ ನೀರವತೆಗೊಂದು ಸ್ವರವಿತ್ತು! ನಿಜ... ಯಾರೋ ಕರೆದ ಹಾಗನ್ನಿಸುತ್ತಿತ್ತು. ಆದರೆ ಹೋಗುವುದು ನನ್ನ ಈ ಕ್ಷಣದ ಆಯ್ಕೆ!

ಈ ಖಾಲಿತನ! ಈ ನಿರ್ವಾತ! ಇದು ನನ್ನನ್ನು ಎಳೆದೊಯ್ದ ಮೇಲೂ ಈ ಜಗತ್ತು ಹೀಗೇ ಮುಂದುವರೆಯಲಿದೆ. ನಾನಿರುವುದಕ್ಕೂ ಇಲ್ಲದಿರುವುದಕ್ಕೂ ವ್ಯತ್ಯಾಸವೇ ಇಲ್ಲ. ಇರುವಂತೆಯೇ ಇಲ್ಲವಾಗುವ ಗಳಿಗೆಯ ತುಡಿತವನ್ನು, ಪ್ರಜ್ಞಾಪೂರ್ವಕವಾಗಿ ಅಪ್ರಜ್ಞೆಯನ್ನು ಆಹ್ವಾನಿಸುವುದನ್ನು ಏನೆನ್ನಬೇಕು? ನಾನೇ ನನ್ನನ್ನು... ನಾನೋ ಮತ್ಯಾರೋ ನನ್ನನ್ನು ಇಲ್ಲವಾಗಿಸುವುದು. ಯಾರಿಂದಾದರೇನು? ಇಲ್ಲವಾಗುವುದು... ಅಷ್ಟೇ. ನಾನು ಇಲ್ಲದಿರುವ ಪ್ರಪಂಚವನ್ನು ನೆನೆಯುತ್ತ ನೆನೆಯುತ್ತ ಇಲ್ಲವಾಗುವುದು.

ಆದರೆ ಒಂದು ಮುಜುಗರದ ಸಂಗತಿಯಿತ್ತು. ಆ ರಾತ್ರಿಗಳಲ್ಲಿ ಮಲಗುವ ಮುನ್ನ ನಾನು ಸ್ಖಲಿಸಿದ್ದೆ. ಬೆತ್ತಲಾಗಿ ಮಲಗಿದ್ದೆ. ಒಂದು ವೇಳೆ ಹೀಗೇ ಇದೇ ಅವಸ್ಥೆಯಲ್ಲಿ ನಾಳೆ ಬಂದವರು ನನ್ನ ದೇಹವನ್ನು ಕಂಡರೆ? ಅದರ ವೀರ್ಯದ ವಾಸನೆ ಅವರ ಮೂಗಿಗೆ ಬಡಿದರೆ? ಇದಕ್ಕೆಷ್ಟು ಅವಮಾನ! ನಾನು ಇಲ್ಲದಿರುವಾಗಲೂ ನನ್ನ ಬಗೆಗಿನ ಇಂಥ ಹೇವರಿಕೆಯನ್ನು ಸಹಿಸದಾದೆ. ಅಂದಿನ ರಾತ್ರಿಗಳಲ್ಲಿ ನನ್ನಿಂದ ವೀರ್ಯವು ಹೊರ ಚೆಲ್ಲಿದ್ದರಿಂದಲೇ ನಾನು ಬದುಕಿದ್ದೇನೆ ಅನ್ನಿಸುವುದೂ ಇದೆ! ಏನೋ ಗೊತ್ತಿಲ್ಲ...' ಎಂದು ಮತ್ತೆ ಆಕಾಶವನ್ನು ತುಂಬಿಕೊಳ್ಳತೊಡಗಿದ.

ಜ್ಯೋತ್ಸ್ನಾ ನೀಲೇಶನ ಎದೆಗೆ ಮುತ್ತಿಟ್ಟು, 'ನೀವು ಯಾರನ್ನಾದರು ನಿಜವಾಗಿ ಪ್ರೇಮಿಸಿದ್ದೀರ?' ಎಂದು ಕೇಳಿದಳು.

'ಬಹುಶಃ ನಾನು ನಿಮ್ಮ ಹತ್ತಿರ ಬರುತ್ತಿರುವುದು ಆ ನೀರವತೆಯ ಕರೆಯಿಂದ ತಪ್ಪಿಸಿಕೊಳ್ಳುವುದಕ್ಕೇ ಇರಬೇಕು.'

'ಓಹ್ ಪ್ಲೀಸ್... ನೀವು ನನ್ನನ್ನೇ ನಿಜವಾಗಿ ಪ್ರೀತಿಸುತ್ತಿದ್ದೀರಿ ಎನ್ನುವ ಉತ್ತರದ ನಿರೀಕ್ಷೆಯಲ್ಲಿ ಈ ಪ್ರಶ್ನೆ ಕೇಳಲಿಲ್ಲ. ನಾನು ಈ ಮುಂಬೈ ಮಹಾನಗರದ ದೆಸೆಯಿಂದ ಈ ದೇಶದಲ್ಲೇ ದೊಡ್ಡ ಸ್ಟಾರ್ ನಟಿ. ಈ ಕ್ಷಣದಲ್ಲೂ ಎಷ್ಟೊಂದು ಗಂಡಸರು ನನ್ನ ನೆನಕೆಯಲ್ಲಿ ಸ್ಖಲಿಸುತ್ತಿರಬಹುದು. ನನಗೆ ಎಷ್ಟೊಂದು ಅಫೇರ್‌ಗಳಾಗಿದ್ದಾವೆ. ಪ್ರೀತಿಸಿದವನೊಂದಿಗೆ ಮದುವೆಯೂ ಆಗಿದೆ. ಕೇವಲ ನನ್ನನ್ನು ಸೇರಲಿಕ್ಕಾಗಿ ನೀವು ಬೆಂಗಳೂರಿನಿಂದ ಇಲ್ಲಿಗೆ ಬಂದಿದ್ದೀರಿ. ನಿಜವೇನೆಂದರೆ, ಇಷ್ಟು ದಿವಸದವರೆಗು ನನ್ನನ್ನು ಯಾರೂ ಪ್ರೀತಿಸಿಯೇ ಇಲ್ಲವೆನ್ನಿಸುತ್ತಿತ್ತು. ಆದರೆ ಇತ್ತೀಚೆಗೆ, ನಾನು ನಿಜವಾಗಿ ಯಾರನ್ನೂ ಪ್ರೀತಿಸಿಯೇ ಇಲ್ಲವೇನೋ ಅಂತನ್ನಿಸುತ್ತಿದೆ. ಅದು ನನಗೆ ತಿಳಿದಿದ್ದು ನೀವು ಬಂದ ಮೇಲೆಯೇ. ಅದಕ್ಕೇ ನಿಮ್ಮನ್ನು ಕೇಳಿದೆ. ನೀವು ಯಾರನ್ನಾದರೂ ನಿಜವಾಗಿ ಪ್ರೀತಿಸಿದ್ದೀರ? ಗೊತ್ತು, ಪ್ರೀತಿಯಲ್ಲಿ ನಿಜ ಸುಳ್ಳು ಅನ್ನುವುದಿಲ್ಲ. ಅದು ನಮ್ಮ ಮಾತಿನ ಭಾವದ ಉದ್ದೀಪನ.'

'ನಿಜ ಸುಳ್ಳಿನ ಪ್ರಶ್ನೆಯಲ್ಲ... ಆದರೆ ನಿಜವಾಗಿ ಹೇಳುತ್ತಿದ್ದೇನೆ, ಈ ಪ್ರೀತಿ ಪ್ರೇಮ ಅಂದರೇನು? ನನಗೆ ನಿಜವಾಗಿ ಗೊತ್ತಿಲ್ಲ. ನೀವು ನನ್ನ ಈ ಮಾತಿನಲ್ಲೇ ನಿಮ್ಮ ಉತ್ತರವನ್ನು ಸರಳವಾಗಿ ಪಡೆದುಕೊಳ್ಳಬಹುದು. ಆದರೆ ಅದು ಅಷ್ಟು ಸರಳವಲ್ಲ ಅನ್ನೋದಷ್ಟೇ ನನ್ನ ಮಾತು.'

'ಹಾಗಿದ್ದರೆ ನಮ್ಮ ಸಂಬಂಧ? ಇದು ಸರಳವಾಗಿದೆಯಾ? ಇದನ್ನು ಕೇವಲ ಮೋಹ, ದೈಹಿಕ ಆಕರ್ಷಣೆ ಅನ್ನುತ್ತೀರ? ನಮ್ಮ ಸಂಬಂಧ ಜಗತ್ತಿಗೆ ಗೊತ್ತಾದರೆ?' ಅವನನ್ನು ಅಲುಗಿಸಲೋಸುಗ ಕೇಳಿದಳು.